ಮನೆಯಲ್ಲಿರಲು ಒಪ್ಪದೆ ತಾನು ರೂಮ್ ಮಾಡಿಕೊಂಡಿರುತ್ತೇನೆಂದು ಹೇಳಿದ್ದ. ಆದರೆ ಅವನಿದ್ದದ್ದು ವೇಶ್ಯೆಯಾಗಿದ್ದ ಸಮರಾಂಗಿನಿ ಎಂಬವಳ ಮನೆಯಲ್ಲಿ. ಅವಳ ಮಗಳು ಸಣ್ಣಂಗಿ ಎಂಬವಳನ್ನು ಕೂಡಿಕೆ ಮಾಡಿಕೊಂಡು ತನ್ನ ಸಂಪಾದನೆಯನ್ನೆಲ್ಲ ಅಲ್ಲಿಗೇ ಸುರಿಯುತ್ತಿದ್ದ ದಾಮೋದರ ನಂತರ ಪದ್ಮಾವತಿ ಎಂಬವಳನ್ನು ಮದುವೆಯಾದುದು ಅವಳು ತರುವ ಚಿನ್ನದ ರೂಪದ ವರದಕ್ಷಿಣೆಯನ್ನು ತಾನೇ ಇಟ್ಟುಕೊಂಡು ಸುಖಪಡಬಹುದು ಎಂಬ ದುರಾಲೋಚನೆಯಿಂದ. ಅಂತೆಯೇ ಹೆಂಡತಿಯ ಚಿನ್ನವನ್ನೆಲ್ಲ ಸುಳ್ಳು ಹೇಳಿ ಮಂಗಳೂರಿಗೆ ತಂದು 'ಇಟ್ಟುಕೊಂಡವಳಿಗೆ' ಕೊಟ್ಟಿದ್ದ. ದಾಮೋದರನಿಗೆ ಮದ್ರಾಸಿನಲ್ಲಿ ಒಳ್ಳೆಯ ಕೆಲಸ ಸಿಗುತ್ತದೆ. ಅವನು ಹೆಂಡತಿಯನ್ನು ಶಾಶ್ವತವಾಗಿ ತೊರೆದು ಸಣ್ಣಂಗಿಯೊಂದಿಗೆ ಮದ್ರಾಸಿನಲ್ಲಿ ಸುಖವಾಗಿರಬೇಕೆಂದು ನಿರ್ಧರಿಸಿ ರೈಲು ಹತ್ತುತ್ತಾನೆ. ನಡುದಾರಿಯಲ್ಲಿ ಸಣ್ಣಂಗಿ ಚಿನ್ನಾಭರಣ ಹಾಗೂ ಹಣವನ್ನೆಲ್ಲ ಕಟ್ಟಿಕೊಂಡು, ಅದೇ ರೈಲಿನಲ್ಲಿ ಹೊರಟಿದ್ದ ತನ್ನ ಪ್ರೇಮಿ ಸುಂದರೇಶನೊಂದಿಗೆ ರೈಲಿನಿಂದಿಳಿದು ಓಡಿಹೋಗುತ್ತಾಳೆ.

ರಾಮಪ್ಪಯ್ಯನ ಭಾವ ಸದಾನಂದ ರಾಯರು ಮಂಗಳೂರಿನಲ್ಲಿ ವಕೀಲರಾಗಿದ್ದರು. ಪ್ರೇಮಾವತಿ ಅವರ ಮನೆಯಲ್ಲಿಯೇ ಇದ್ದು ಕಾಲೇಜಿಗೆ ಹೋಗುತ್ತಿದ್ದಳು. ಮಾವನಿಗೆ ತಿಳಿಯದಂತೆ ಅವಳು ತನ್ನ ಪ್ರಿಯಕರ ಸುಂದರೇಶನ ಜತೆಗೆ ರಾತ್ರಿ ಹೊತ್ತು ಹೋಟೆಲುಗಳಲ್ಲಿಯೂ ಇರುತ್ತಿದ್ದುದುಂಟು. ಕೊನೆಗೆ ಬಿ.ಎ. ಮುಗಿಸಿದ ನಂತರ ಸುಂದರೇಶನ ಜತೆಗೆ ಮದ್ರಾಸಿಗೆ ಹೋಗಿ ಮದುವೆಯಾಗುವ ಕನಸು ಕಾಣುತ್ತಿದ್ದ ಪ್ರೇಮಾವತಿ ತಾನು ಮನಮೆಚ್ಚಿದವನನ್ನು ಮದುವೆಯಾಗಲು ದೂರ ಹೋಗುವೆನೆಂದು ಮನೆಗೆ ಪತ್ರ ಬರೆದು ರೈಲು ನಿಲ್ದಾಣದಲ್ಲಿ ಸುಂದರೇಶನಿಗಾಗಿ ಕಾಯುತ್ತಾಳೆ. ಅವನು ಅವಳಿಗೆ ಕೈಕೊಟ್ಟು ಸಣ್ಣಂಗಿಯನ್ನು ಹಾರಿಸಿಕೊಂಡು ಹೋಗಿರುತ್ತಾನೆ. ಪ್ರೇಮಾವತಿ ರೈಲಿನಡಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳಲು ಹೊರಟಾಗ ಗಾರ್ಡ್ ಮತ್ತು ಅವನ ಹೆಂಡತಿ ಅವಳನ್ನು ರಕ್ಷಿಸಿ ಕೊಳಸಾಲಿಗೆ ತಂದುಬಿಡುತ್ತಾರೆ. ಅವಳಾಗಲೇ ಗರ್ಭಿಣಿ.

ದಾಮೋದರನ ಹೆಂಡತಿ ಪದ್ಮಾವತಿಯ ಸಲಹೆಯಂತೆ ಪ್ರೇಮಾವತಿಯ ಗರ್ಭಪಾತ ಮಾಡಿಸದೆ ಅವಳಿಗೆ ಅಸೌಖ್ಯ ಎಂದು ಅವಳು ಹೆರುವವರೆಗೆ ಮನೆಯಲ್ಲಿಟ್ಟುಕೊಂಡು, ಅವಳು ಹೆತ್ತ ಮಗು ಪದ್ಮಾವತಿಯದು ಎಂದು ಎಲ್ಲರಿಗೂ ಹೇಳುತ್ತಾರೆ. ನಂತರ ಪ್ರೇಮಾವತಿಯನ್ನು ಪದ್ಮಾವತಿಯ ಅಣ್ಣ, ಡಾಕ್ಟರ್ ಮಾಧವನಿಗೆ ಮದುವೆ ಮಾಡಿಕೊಡುತ್ತಾರೆ. ಪ್ರೇಮಾವತಿ ಗಂಡನನ್ನು ತಿರಸ್ಕಾರದಿಂದ ನೋಡುತ್ತಾ ಅವನನ್ನು ಪ್ರೀತಿಸದೆ ಅನಿವಾರ್ಯವಾಗಿ ಅವನ ಜತೆಗೆ ಇರುತ್ತಾಳೆ. ಸುಂದರೇಶನು ಅವಳ ವಿಳಾಸ ಪತ್ತೆ ಮಾಡಿ ಮದ್ರಾಸಿಗೆ ಬರಲು ಪತ್ರ ಬರೆಯುತ್ತಾನೆ. ಅವಳು ಗಂಡನನ್ನು ಬಿಟ್ಟು ಮದ್ರಾಸಿಗೆ ಓಡಿಹೋಗುತ್ತಾಳೆ. ಸುಂದರೇಶನು ಸಿನಿಮಾ ಕ್ಷೇತ್ರದಲ್ಲಿದ್ದು ಅವಳನ್ನು ನಟಿಯನ್ನಾಗಿಸುತ್ತೇನೆಂದು ಅವಳನ್ನು ಯಾರು ಯಾರಿಗೋ ಭೋಗಿಸಲು ಒಪ್ಪಿಸುತ್ತಾನೆ. ಅವಳಿಗೆ ರಾಧಾರಮಣಿ ಎಂಬ ಹೆಸರಿಡುತ್ತಾನೆ. ಕೊನೆಗೆ ಅವಳ ತಲೆಹಿಡುಕನೇ ಆಗುತ್ತಾನೆ. ಅವಳು ಊಟಕ್ಕಿಲ್ಲದಾಗ ತಾವಿದ್ದ ಕಟ್ಟಡದ ಮಾಲಕ ನಿರ್ದೇಶಕ ರಾಜಾರಾಮನನ್ನು ಹಾಸಿಗೆಗೆ ಕರೆದು ಹಣ ಸಂಪಾದಿಸಬೇಕಾದ ಪರಿಸ್ಥಿತಿ ಬರುತ್ತದೆ. ಅವಳ ಬಾಳು ನಾಯಿ ಬಾಳಾಗುತ್ತದೆ.

ಸುಂದರೇಶನು ಮೊದಲು ಹಾರಿಸಿಕೊಂಡು ಬಂದಿದ್ದ ಸಣ್ಣಂಗಿ ನಟನಾ ಸಾಮರ್ಥ್ಯದಿಂದಲೂ ಅದೃಷ್ಟದಿಂದಲೂ ಸಿನಿಮಾನಟಿಯಾಗಿ, ವಿದ್ಯುಲ್ಲತಾ ಎಂಬ ಹೆಸರಿನಿಂದ ಪ್ರಖ್ಯಾತಳಾಗಿರುತ್ತಾಳೆ. ಸುಂದರೇಶನು ಮಂಗಳೂರಿಗೆ ಬಂದದ್ದೇ ಸುಂದರ ಹುಡುಗಿಯರನ್ನು ಆಕರ್ಷಿಸಿ ಮದ್ರಾಸಿಗೆ ಕರೆತರುವುದಕ್ಕಾಗಿತ್ತು.

ಈ ಭಾಗದಲ್ಲಿ ನವಗಿರಿನಂದರು ಮದ್ರಾಸಿನಲ್ಲಿ ಕೇಂದ್ರೀಕೃತವಾಗಿದ್ದ ಕನ್ನಡ ಚಲನಚಿತ್ರ ರಂಗದ ಹಿನ್ನೆಲೆಯ ಬದುಕಿನ ವಿವಿಧ ಆಯಾಮಗಳನ್ನು ವಿಸ್ತೃತವಾಗಿ ಚಿತ್ರಿಸಿದ್ದಾರೆ. ಅಲ್ಲಿ ನಟಿಯರಾಗಬೇಕೆಂಬ ಹಂಬಲದಿಂದ